ಅ) ಔರಾದ್ ತಾಲ್ಲೂಕಿನಲ್ಲಿ ಅಗ್ನಿಶಾಮಕದಳದ ಕಛೇರಿ ನಿರ್ಮಾಣ ಕಾರ್ಯ ಸಂಪೂರ್ಣವಾಗಿ 2 ವರ್ಷಗಳಾದರೂ ಸಿಬ್ಬಂದಿ ಹಾಗೂ ವಾಹನ ಸೌಕರ್ಯ ಒದಗಿಸಿ, ಕಛೇರಿ ಪ್ರಾರಂಭಿಸದೇ ಇರುವ ಸಂಗತಿ ಸರಕಾರದ ಗಮನಕ್ಕೆ ಬಂದಿದೆಯೇ ಈ ರೀತಿ ವಿಳಂಬವಾಗಲು ಕಾರಣಗಳೇನು? ಇಂಥ ಕಛೇರಿಯ ಉದ್ಘಾಟನೆ ಸಂಭವವಿದೆಯೇ ಹಾಗಾದರೆ ಯಾವಾಗ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಆ) ಜಾರಾದ್ ಪಟ್ಟಣಕ್ಕೆ ಒಂದು ಹೊಸ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಈಗಾಗಲೇ ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆ. ಒಂದು ಹೊಸ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಈ ಕೆಳಗೆ ನಮೂದಿಸಿರುವ ಕನಿಷ್ಟ ಸೌಲಭ್ಯವು ಬೇಕಾಗಿರುತ್ತದೆ.

1. ಎರಡು ಎಕರೆ ಜಮೀನು

2. ಅಗ್ನಿಶಾಮಕ ಠಾಣೆಯ ಕಟ್ಟಡ ಮತ್ತು ಸಿಬ್ಬಂದಿಗಳ ವಸತಿ ಗೃಹಗಳು

3. 2 ಜಲವಾಹನಗಳು

4. ಠಾಣೆಯಲ್ಲಿ ಕಾರ್ಯ ನಿರ್ವಹಿಸಲು ಸಿಬ್ಬಂದಿಗಳು.

ಜೌರಾದ್ ಪಟ್ಟಣದಲ್ಲಿ ಕೇವಲ ತಾತ್ಕಾಲಿಕ ಕಟ್ಟಡವು ಲಭ್ಯವಿರುತ್ತದೆ. ಖಾಲಿ ಇರುವ ನೇರ ನೇಮಕಾತಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ, ಜೌರಾದ್ ಪಟ್ಟಣಕ್ಕೆ ಮಂಜೂರಾಗಿರುವ ವಾಹನಗಳನ್ನು ಖರೀದಿಸುವ ಬಗ್ಗೆ ಪರೀಶೀಲಿಸಲಾಗುತ್ತಿದೆ. ಈ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಂಡು ಅಗ್ನಿಶಾಮಕ ಠಾಣೆಯನ್ನು ತೆರೆಯಲಾಗುವುದು.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ

1208 (1438) ಶ್ರೀ ಗುರುಪಾದ ಗೌಡ ಸಂಗನ ಗೌಡ ಪಾಟೀಲ್ (ರೋಣ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬರುವ ಬೇಸಿಗೆಯಲ್ಲಿ ಉಂಟಾಗುವ ವಿದ್ಯುತ್ ಕೊರತೆ ಎದುರಿಸಲು ಸರ್ಕಾರ ಕೈಗೊಂಡ ವಿಶೇಷ ಕ್ರಮಗಳೇನು;

ಆ) ರಾಜ್ಯದಲ್ಲಿ ಹೊಸದಾಗಿ ಆರಂಭಿಸಲು ಉದ್ದೇಶಿಸಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳೆಷ್ಟು;

ಇ) ಗಾಳಿ ಬಳಸಿ ವಿದ್ಯುತ್ ಉತ್ಪಾದನೆ : ಮಾಡಲು ಸರ್ಕಾರ ಇದುವರೆಗೂ ಮಾಡಿದ ಖರ್ಚು ಎಷ್ಟು? ಈ ಯೋಜನೆ ಫಲಪ್ರದ ವಾಗಿದೆಯೇ?

ಈ) ಗಜೇಂದ್ರಗಡ ನಗರದ ಹತ್ತಿರವಿರುವ ಕಾಲ ಕಾಲೇಶ್ವರ ಗುಡ್ಡದ ಮೇಲೆ ಗಾಳಿ ಬಳಸಿ ವಿದ್ಯುತ್ ಉತ್ಪಾದಿಸಲು ಸರ್ಕಾರ ಪರಿಶೀಲಿಸುವುದೇ?

ಶ್ರೀ ವೀರಕುಮಾರ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಪ್ರಸಕ್ತ ವರ್ಷವಾದ 2000-2001 ರ ಸಾಲಿನಲ್ಲಿ ರಾಜ್ಯವು ಅನುಭವಿಸುತ್ತಿರುವ ವಿದ್ಯುತ್ ಕೊರತೆಯ ಪ್ರಮಾಣ ಸುಮಾರು 1900 ದಶ ಲಕ್ಷ ಯೂನಿಟ್‌ಗಳು.

ವಿದ್ಯುತ್ ಕೊರತೆಯನ್ನು ನಿಡಲು ಈ ಕೆಳಕಂಡ ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಹಾಲಿ ಇರುವ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ವಿದ್ಯುತ್ ಉತ್ಪಾದನೆಯನ್ನು ಗರಿಷ್ಠಗೊಳಿಸಲಾಗಿದೆ ಮತ್ತು ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಯೋಜನೆಗಳಿಂದ ರಾಜ್ಯದ ಪಾಲನ್ನು ಪೂರ್ಣ ರೀತಿಯಲ್ಲಿ ಪಡೆಯಲಾಗುತ್ತಿದೆ.

2. ಸಕ್ಕರೆ ಕಾರ್ಖಾನೆಗಳಲ್ಲಿಯೂ ಸಹ ಉತ್ಪಾದನೆಯಾಗಿ ವಿದ್ಯುತ್ತನ್ನು ಉತ್ಪಾದಿಸಲು ಸರ್ಕಾರವು ಉತ್ತೇಜನ ನೀಡುತ್ತಿದೆ. ಇಂತಹ 6 ಕಾರ್ಖಾನೆಗಳಿಂದ ಸುಮಾರು 104. ಮೆಗಾ ವ್ಯಾಟ್‌ನಷ್ಟು ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಅಲ್ಲದೇ, ಖಾಸಗೀ ಕ್ಷೇತ್ರದಲ್ಲಿ ಕಿರು ಜಲ ವಿದ್ಯುತ್ ಮತ್ತು ಗಾಳಿ ಆಧಾರಿತ ವಿದ್ಯುತ್ ಯೋಜನೆಗಳ ಸರಬರಾಜಿಗೆ ಹೆಚ್ಚಿನ ಉತ್ತೇಜನವನ್ನು ನೀಡಲಾಗುತ್ತಿದೆ. ಪ್ರಸ್ತುತ 124.4 ಮೆಗಾ ವ್ಯಾಟ್‌ನಷ್ಟು ಕಿರು ಜಲ ವಿದ್ಯುತ್ ಮತ್ತು ಗಾಳಿ ಆಧಾರಿತ ವಿದ್ಯುತ್ ಯೋಜನೆಗಳು ಖಾಸಗೀ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿವೆ.

3. ಸುಮಾರು 8249 ಮೆಗಾ ವ್ಯಾಟ್‌ನಷ್ಟು ಸಾಮರ್ಥ್ಯದ ವಿದ್ಯುತ್ ಉತ್ಪಾದನೆಗೆ ಕರ್ನಾಟಕ ಸರ್ಕಾರವು ಖಾಸಗೀ ರಂಗದಲ್ಲಿ ಹಲವಾರು ಸಂಸ್ಥೆಗಳಿಗೆ ಅನುಮೋದನೆಯನ್ನು ನೀಡಿರುತ್ತದೆ. ಈಗಾಗಲೇ ರಾಯಲ್ ಸೀಮಾ ಅಲ್ಕಲೀಸ್ ಲಿಮಿಟೆಡ್, ಬಳ್ಳಾರಿಯವರು 28 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆಯ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದು, ಇದು ಮುಕ್ತಾಯದ ಹಂತದಲ್ಲಿರುತ್ತದೆ. ಮಂಗಳೂರಿನಲ್ಲಿ ತಣ್ಣೀರುಬಾವಿ ಕಂಪನಿಯು ಒಂದು ಬಾರ್ಜ್ ಮೌಂಟೆಡ್ (ಸುಮಾರು 220 ಮೆಗಾ ವ್ಯಾಟ್) ವಿದ್ಯುತ್ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದ್ದು, ಈ ಯೋಜನೆಯೂ ಸಹಾ ಮುಕ್ತಾಯದ ಹಂತದಲ್ಲಿರುತ್ತದೆ.

4. ಹೊಸ ಸ್ವತಂತ್ರ ವಿದ್ಯುತ್ ಉತ್ಪಾದನಾ ಯೋಜನೆಗಳಿಂದ ಮಾಡಿಕೊಂಡ ವಿದ್ಯುತ್ ಖರೀದೊಪ್ಪಂದಗಳ ಪ್ರಕಾರ ವಿದ್ಯುತ್‌ನ್ನು ಪಡೆಯಲಾಗುತ್ತಿದೆ.

5. ಪೂರ್ವ ವಲಯದಲ್ಲಿ ಎನ್.ಟಿ.ಪಿ.ಸಿ. ಕೇಂದ್ರ ಘಟಕಗಳಿಂದ ಉತ್ಪಾದನೆಗೊಂಡ ವಿದ್ಯುತ್‌ನ ದಿನವಹಿ ಸರಾಸರಿ 1.5 ರಿಂದ 2 ದಶಲಕ್ಷ ಯೂನಿಟ್ಟುಗಳ ಪ್ರಮಾಣದಲ್ಲಿ ಪಡೆಯಲಾಗುತ್ತಿದೆ.

6. ಇತ್ತೀಚೆಗೆ ಗೆರುಸೊಪ್ಪದ ಜಲ ವಿದ್ಯುತ್ ಯೋಜನೆಯಲ್ಲಿ ಕರ್ನಾಟಕ ವಿದ್ಯುತ್ ನಿಗಮವು 60 ಮೆಗಾ ವ್ಯಾಟ್ ಸಾಮರ್ಥ್ಯದ ಮೊದಲ ವಿದ್ಯುತ್ ಉತ್ಪಾದನಾ ಘಟಕವನ್ನು ಕಾರ್ಯೋನ್ಮುಖಗೊಳಿಸಿ, ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಿರುತ್ತದೆ.

ಈ) ವಿದ್ಯುತ್ ಉತ್ಪಾದನೆಯನ್ನು ಖಾಸಗೀ ರಂಗಕ್ಕೆ ಮುಕ್ತಗೊಳಿಸಲಾಗಿದ್ದರಿಂದ, ಈಗಾಗಲೇ ರಯಲಸೀಮ ಆಲ್ಕಲೀಸ್ ಲಿಮಿಟೆಡ್, ಬಳ್ಳಾರಿಯವರು 28 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದೆ. ಟಾಟಾ ಪವರ್ ಕಂಪನಿ ಬೆಳಗಾವಿಯಲ್ಲಿ 81 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆಯ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದು ಇದು ಮುಕ್ತಾಯದ ಹಂತವನ್ನು ತಲುಪಿರುತ್ತದೆ. ಶೀಘ್ರದಲ್ಲಿಯೇ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸುವ ನಿರೀಕ್ಷೆ ಇರುತ್ತದೆ. ಮಂಗಳೂರಿನಲ್ಲಿ ತಣ್ಣೀರ್ ಬಾವಿ ಪವರ್ ಕಂಪನಿಯು ಸುಮಾರು 220 ಮೆಗಾವ್ಯಾಟ್ ಸಾಮರ್ಥ್ಯದ ಬಾರ್ಜ್ ಮೌಂಟೆಡ್ ವಿದ್ಯುತ್ ಯೋಜನೆಯ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದು ಇದೂ ಸಹಾ ಅಂತಿಮ ಘಟ್ಟದಲ್ಲಿರುತ್ತದೆ. ಬಾಕಿ ಉಳಿದ ಖಾಸಗೀ ಕಂಪನಿಗಳು, ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರಬೇಕಾಗಿರುತ್ತದೆ.

ರಾಜ್ಯದಲ್ಲಿ ಹೊಸದಾಗಿ ಆರಂಭಿಸಲು ಉದ್ದೇಶಿಸಿರುವ ಅಸಂಪ್ರದಾಯಿತಕ ಇಂಧನ ಮೂಲಗಳ ವಿದ್ಯುತ್ ಉತ್ಪಾದನಾ ಕೇಂದ್ರಗಳು ಮತ್ತು ವಿದ್ಯುತ್ ಉತ್ಪಾದನಾ ಕೇಂದ್ರಗಳು ಮತ್ತು ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಈ ಕೆಳಕಂಡಂತಿರುತ್ತದೆ.

ವಿದ್ಯುತ್ ಉತ್ಪಾದನಾ ಮೂಲ	ಕೇಂದ್ರ : ಕಂಪನಿಗಳ ಸಂಖ್ಯೆ	ಉತ್ಪಾದನಾ ಸಾಮರ್ಥ್ಯ ಮೆಗಾ ವ್ಯಾಟ್
ಗಾಳಿ ಶಕ್ತಿ	40	798.20
ಕಿರು ಜಲ	89	543.43
ಸಹ ವಿದ್ಯುತ್	20	324.00
ಜೈವಿಕ ಶಕ್ತಿ	9	64.2
ಒಟ್ಟು	**158**	**1719.83**

ಇ) ಕೇಂದ್ರ ಸರ್ಕಾರದ ಪ್ರಾತ್ಯೇಕ್ಷತೆ ಯೋಜನೆಯಡಿಯಲ್ಲಿ ಕರ್ನಾಟಕ ವಿದ್ಯುತ್ ನಿಗಮವು (ಕೆ.ಪಿ.ಸಿ) ಕಪ್ಪತ್ತಗುಡ್ಡದಲ್ಲಿ 2.025 ಮೆಗಾ ವ್ಯಾಟ್ ಸಾಮರ್ಥ್ಯದ ಗಾಳಿಯಂತ್ರ ವಿದ್ಯುತ್ ಘಟಕ ಸ್ಥಾಪಿಸಿರುತ್ತದೆ. ಈ ಯೋಜನೆಗೆ ಸುಮಾರು 11.30 ಕೋಟಿ ರೂಪಾಯಿಗಳು ಖರ್ಚಾಗಿದ್ದು ಕೇಂದ್ರ ಸರ್ಕಾರವು ಶೇಕಡ 75 ರಷ್ಟು ಹಣವನ್ನು ಸಹಾಯ ಧನವಾಗಿ ನೀಡಿರುತ್ತದೆ. ಉಳಿದ ಶೇಕಡ 25 ರಷ್ಟು ಹಣವನ್ನು ಕೆ.ಪಿ.ಸಿ.ಯ ಖರ್ಚು ಮಾಡಿರುತ್ತದೆ. ಈ ಯೋಜನೆಯಿಂದ ಇದುವರೆಗೆ 22 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಲಾಗಿದೆ. ಈ ಯೋಜನೆಯು ಫಲಪ್ರದವಾಗಿರುತ್ತದೆ.

ಈ) ಗಜೇಂದ್ರ ಗಡ ನಗರದ ಸಮೀಪ ಕಾಲಕಾಲೇಶ್ವರ ಗುಡ್ಡದ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಹನುಮಸಾಗರ ಹಾಗೂ ಮಾಲಗತ್ತಿ ಗುಡ್ಡಗಳ ಮೇಲೆ ಈಗಾಗಲೇ ಗಾಳಿ ಮಾಪನ ಸಮೀಕ್ಷೆ ನಡೆಸಲಾಗಿದೆ. ಹಾಗೂ ಹನುಮಸಾಗರದಲ್ಲಿ 1.92 ಮೆಗಾವ್ಯಾಟ್ ಸಾಮರ್ಥ್ಯದ ಗಾಳಿ ವಿದ್ಯುತ್ ಘಟಕವನ್ನು ಸ್ಥಾಪಿಸಲಾಗಿದೆ. ಇನ್ನೂ ಯಾರಾದರೂ ಖಾಸಗಿಯವರು ಮುಂದೆ ಬಂದಲ್ಲಿ ಅನುಮತಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ಗ್ರಾಮೀಣ ಪ್ರದೇಶಗಳಿಗೆ ಹ್ಯಾಮ್ಲೆಟ್ ಯೋಜನೆ ಜಾರಿ

1210 (1630) ಶ್ರೀ ಹೆಚ್. ಗೋಪಾಲ ಭಂಡಾರಿ (ಕಾರ್ಕಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶಗಳಲ್ಲಿ ಹ್ಯಾಮ್ಲೆಟ್ ಯೋಜನೆಯಲ್ಲಿ ಮಂಜೂರಾದ ಕಾರ್ಯಕ್ರಮಗಳನ್ನು ಇಲಾಖೆಯೇ ಅನುಷ್ಠಾನ ಮಾಡುತ್ತದೆಯೇ ಅಥವಾ ಟರ್ನ್‌ಕೀ ವ್ಯವಸ್ಥೆಯಲ್ಲಿ ಖಾಸಗಿ ಗುತ್ತಿಗೆದಾರರಿಂದ ಮಾಡಿಸಲಾಗುತ್ತದೆಯೆ;

ಆ) ಈ ವರ್ಷ ಮಂಜೂರಾದ ಹ್ಯಾಮ್ಲೆಟ್‌ಗಳನ್ನು ಮಾರ್ಚ್ ಕೊನೆಯೊಳಗೆ ಅನುಷ್ಠಾನ ಮಾಡುವ ಯೋಚನೆ ಇದೆಯೆ;

ಇ) ಅನುಷ್ಠಾನದ ಹಂತದಲ್ಲಿ ಏನಾದರೂ ಸಮಸ್ಯೆ ಇದೆಯೆ?

ಶ್ರೀ ವೀರಕುಮಾರ. ಅ.ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಗ್ರಾಮೀಣ ಪ್ರದೇಶಗಳಲ್ಲಿ ಹ್ಯಾಮ್ಲೆಟ್‌ಗಳ ವಿದ್ಯುದೀಕರಣದ ಕಾಮಗಾರಿಯನ್ನು ಬಹುಪಾಲು ಇಲಾಖಾ ವತಿಯಿಂದಲೇ ಈಗ ಏರ್ಪಡಿಸಲಾಗುತ್ತಿದೆ. ಅದಾಗ್ಯೂ , ಕೆಲವೆಡೆ ಪ್ರಾಯೋಗಿಕವಾಗಿ ಟರ್ನ್‌ಕೀ ಆಧಾರದ ಮೇಲೆ ಈ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ.

ಆ) 2000-2001 ನೇ ಸಾಲಿನಲ್ಲಿ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಮಂಜೂರಾದ ಹ್ಯಾಮ್ಲೆಟ್‌ಗಳನ್ನು ವಿದ್ಯುದೀಕರಿಸಲು ಖಾತರಿಯನ್ನು ನೀಡುವ ಬಗ್ಗೆ ಪರಿಶೀಲಿಸುತ್ತದೆ.

ಇ) ಖಾತರಿಯನ್ನು ನೀಡುವ ಬಗ್ಗೆ ಪರಿಶೀಲಿಸುತ್ತಿರುವುದರಿಂದ ಅನುಷ್ಠಾನದ ಪ್ರಶ್ನೆಯು ಸದ್ಯಕ್ಕೆ ಉದ್ಭವಿಸುವುದಿಲ್ಲ.

ಮೈಸೂರು ತಾಲ್ಲೂಕು ಮತ್ತು ನಗರದಲ್ಲಿ ವಾಣಿಜ್ಯ ತೆರಿಗೆ ಸಂಗ್ರಹ

1211 (1341) ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಹಣಕಾಸು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕು ಮತ್ತು ನಗರಗಳಲ್ಲಿ ಸಿಬ್ಬಂದಿಯವರು ಹಾಗೂ ನಿರೀಕ್ಷಕರು : ಅಧಿಕಾರಿಗಳು ಹೆಚ್ಚಾಗಿದ್ದು ವಾಣಿಜ್ಯ ತೆರಿಗೆ ಸಂಗ್ರಹವನ್ನು ಚುರುಕುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?